ಅ) 1998-99ನೇ ಸಾಲಿಗೆ ತುಮಕೂರು ಜಿಲ್ಲೆಯಲ್ಲಿ ಅಧಿಕೃತವಾಗಿ 554 ಸಾರಾಯಿ ಸನ್ನದು ನೀಡಲಾಗಿದೆ. ಅನಧಿಕೃತವಾಗಿ ಸಾರಾಯಿ ಮಾರಾಟ ಕೇಂದ್ರಗಳು ನಡೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ.

ಪೋಲೀಸ್ ಜನಸಂಪರ್ಕ ಸಭೆ

492 - ಶ್ರೀ ಡಿ.ವಿ. ಸದಾನಂದ ಗೌಡ (ಪುತ್ತೂರು) : ಮಾನ್ಯ ಗೃಹ ಮತ್ತು ವಕ್ಫ್ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಈ ಹಿಂದೆ ಚಾಲ್ತಿಯಲ್ಲಿದ್ದ ಪೋಲೀಸ್ ಜನಸಂಪರ್ಕ ಸಭೆಯನ್ನು ಈಗಲೂ ನಡೆಸಲಾಗುತ್ತಿದೆಯೇ?

ಆ) ಪೋಲೀಸ್ ಠಾಣೆಗಳಲ್ಲಿ ನಾಗರೀಕ ಸಮಿತಿ ಇದೆಯೆ? ಹಾಗಿದ್ದಲ್ಲಿ ಇದರ ರಚನೆಗಳನ್ನು ಹೇಗೆ ಮತ್ತು ಯಾವ ಆಧಾರಗಳಲ್ಲಿ ಮಾಡಲಾಗುವುದು, ಇದರ ಕಾರ್ಯವ್ಯಾಪ್ತಿ ಏನು?

ಶ್ರೀ ಆರ್. ರೋಷನ್ ಬೇಗ್ (ಗೃಹ ಮತ್ತು ವಕ್ಫ್ ರಾಜ್ಯ ಸಚಿವರು) :

ಅ) ಹೌದು.

ಆ) ಹೌದು. ನಾಗರೀಕ ಸಮಿತಿಗಳು ಪೋಲೀಸ್ ಠಾಣಾ ಮಟ್ಟದಲ್ಲಿ ಅಸ್ತಿತ್ವದಲ್ಲಿದ್ದು, ಈ ಸಮಿತಿಯು ವ್ಯಾಪ್ತಿ, ಜನಸಂಖ್ಯೆ, ಪೋಲೀಸ್ ಠಾಣೆಯ ಸಮಸ್ಯೆಗಳಿಗುಣವಾಗಿ ರಚನೆಯಾಗಿರುತ್ತದೆ. ಪೋಲೀಸ್ ಕಾರ್ಯವ್ಯಾಪ್ತಿಗೆ ಸಂಬಂಧಿಸಿದ ಸಮಾಜದ ಎಲ್ಲಾ ಮುಖ್ಯ ವಿಭಾಗದ ಪ್ರತಿನಿಧಿಗಳನ್ನೊಳಗೊಂಡಿರುತ್ತದೆ. ಈ ಸಮಿತಿಯು ತನ್ನ ವ್ಯಾಪ್ತಿಯಲ್ಲಿ ಪೋಲೀಸರು ಕಾರ್ಯನಿರ್ವಹಿಸಲು ಸಹಾಯ ನೀಡುತ್ತದೆ.

ರಾಜ್ಯದಲ್ಲಿ ಅಂತರ್ಜಲ ಕುರಿತು

493 - ಶ್ರೀ ಅರಗ ಜ್ಞಾನೇಂದ್ರ (ತೀರ್ಥಹಳ್ಳಿ) : ಮಾನ್ಯ ಸಣ್ಣ ನೀರಾವರಿ ಮತ್ತು ಅಂತರ್ಜಲಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದ ಅಂತರ್ಜಲ ಬತ್ತುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ, ಅಂತರ್ಜಲ ರಕ್ಷಣೆಗೆ ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು?

ಇ) ಅಂತರ್ಜಲ ನಿಯಂತ್ರಣ ಮಸೂದೆ ಜಾರಿಗೆ ತರಲು ಸರ್ಕಾರ ಉದ್ದೇಶಿಸಿದೆಯೇ? ಹಾಗಿದ್ದಲ್ಲಿ ಯಾವಾಗ ಜಾರಿಗೆ ತರಲಾಗುವುದು?

ಶ್ರೀ ತಿಪ್ಪೇಸ್ವಾಮಿ (ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಸಚಿವರು) :

ಅ) ಹೌದು.

ಅ) ಅಂತರ್ಜಲ ರಕ್ಷಣೆಗಾಗಿ ಅಂತರ್ಜಲ ಕೃತಕ ಮರು ಪೂರೈಕೆ ರಚನೆಗಳನ್ನು ನಿರ್ಮಾಣ ಮಾಡಲು ರಾಜ್ಯದಾದ್ಯಂತ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದು, ಈಗಾಗಲೇ ಕೆಲವು ರಚನೆಗಳನ್ನು ನಿರ್ಮಾಣ ಮಾಡಲಾಗಿದೆ. ಇದರಿಂದ ಅಂತರ್ಜಲ ವೃದ್ಧಿಯಾಗಿರುವುದು ದೃಢಪಟ್ಟಿದೆ.

ಇ) ಅಂತರ್ಜಲ ನಿಯಂತ್ರಣದ ಬಗ್ಗೆ, ಕರಡು ಮಸೂದೆಯನ್ನು ತಯಾರಿಸಿದ್ದು, ಇದು ಸರ್ಕಾರದ ಪರಿಶೀಲನೆಯಲ್ಲಿದೆ.

ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯ ಖಾಸಗೀಕರಣ

494 - ಶ್ರೀ ರಾಮಲಿಂಗ ರೆಡ್ಡಿ (ಜಯನಗರ) : ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯನ್ನು ಖಾಸಗೀಕರಣಗೊಳಿಸುವ ಪ್ರಸ್ತಾವನೆ ಸರ್ಕಾರದ ಮುಂದೆ ಇದೆಯೇ ?

ಆ) ಹಾಗಿದ್ದಲ್ಲಿ ಇದರಿಂದ ಆಗತಕ್ಕ ಅನುಕೂಲಗಳೇನು ?

ಇ) ಈ ಮಂಡಳಿಯಲ್ಲಿ ಕೆಲಸ ಮಾಡುವ ನೌಕರರುಗಳ ಸಂಖ್ಯೆ ಎಷ್ಟು ?

ಈ) ಈ ನೌಕರರುಗಳಿಗೆ ಇದರಿಂದ ತೊಂದರೆ ಆಗುವುದಿಲ್ಲವೇ ?

ಶ್ರೀ ಶರಣ ಬಸಪ್ಪ ದರ್ಶನಾಪುರ (ಇಂಧನ ರಾಜ್ಯ ಸಚಿವರು) :

ಅ) ಖಾಸಗೀ ವಲಯವು ವಿದ್ಯುತ್ ವಿತರಣೆಯಲ್ಲಿ ಭಾಗವಹಿಸುವ ವಿಷಯವು ಸರ್ಕಾರದ ತೀವ್ರ ಪರಿಶೀಲನೆಯಲ್ಲಿದೆ. ಇದರಲ್ಲಿ ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯ ಖಾಸಗೀಕರಣವು ಸೇರಬಹುದು.

ಆ) 1) ಉತ್ತಮ ಗ್ರಾಹಕ ಸೇವೆಗೆ ಕಾರಣವಾಗುವ ಹೆಚ್ಚಿನ ಚಾಲನಾ ಸಕ್ಷಮತೆ ಗ್ರಾಹಕರಿಗೆ ಕಡಿಮೆ ವೆಚ್ಚ.

2) ಪ್ರಸರಣಾ ಮತ್ತು ವಿತರಣೆಯಲ್ಲಿ ಖಾಸಗೀ ಕ್ಷೇತ್ರದ ಭಾಗವಹಿಸುವಿಕೆಯು ವಿದ್ಯುತ್ ಕ್ಷೇತ್ರದಲ್ಲಿ ಹೆಚ್ಚಿನ ಬಂಡವಾಳ ಹೂಡಿಕೆಗೆ ಅವಕಾಶವಾಗಿ ಇದರಿಂದ ರಾಜ್ಯದ ಸರ್ವತೋಮುಖ ಅಭಿವೃದ್ಧಿಗೆ ಅವಕಾಶವಾಗುತ್ತದೆ.

ಇ) ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯಲ್ಲಿ, ಕೆಲಸ ನಿರ್ವಹಿಸುತ್ತಿರುವ ಒಟ್ಟು ನೌಕರರ ಸಂಖ್ಯೆ 41,839

ಈ) ಖಾಸಗೀಕರಣ ಮಾಡುವ ಹಂತದಲ್ಲಿ ನೌಕರರ ಹಿತದೃಷ್ಟಿಯನ್ನು ಕಾಪಾಡಿಕೊಳ್ಳಲಾಗುವುದು.